# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 24-11-2022

## ಬಗದಲ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 85/2022 ಕಲಂ 279,304(ಎ) ಐಪಿಸಿ ಜೊತೆ 187 ಐಎಮವಿ ಕಾಯಿದೆ :-

ದಿನಾಂಕ 23.11.2022 ರಂದು  0930 ಗಂಟೆಯ ಸುಮಾರಿಗೆ ಕೋಯ್ಯಾ ಚಕ್ರಪಾಣಿ ಇತನು ತನ್ನ ಮೋಟಾರ ಸೈಕಲ ನಂ ಕೆಎ38ಎಕ್ಸ0905 ನೇದರ ಮೇಲೆ ಬೀದರದಿಂದ ಬೇಮಳಖೇಡಕ್ಕೆ ಹೋಗುತ್ತಿದ್ದಾಗ ಎದುರಿನಿಂದ ಅಂದರೆ ಬಗದಲ ಕಡೆಯಿಂದ ಬೀದರ ಕಡೆಗೆ ಒಂದು ಲಾರಿ ನಂ ಕೆಎ56/6434 ನೇದರ ಚಾಲಕ ತನ್ನ ಲಾರಿಯನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಡಿಕ್ಕಿ ಮಾಡಿ ಲಾರಿ ಸ್ಥಳದಲ್ಲಿಯೇ ಬಿಟ್ಟು ಒಡಿ ಹೋಗಿರುತ್ತಾನೆ. ಡಿಕ್ಕಿಯ ಪರಿಣಾಮ ಕೊಯ್ಯಾ ಚಕ್ರಪಾಣಿ ಇತನಿಗೆ ಎದೆಯ ಬಲ ಭಾಗದಲ್ಲಿ, ಹೊಟ್ಟೆಯಲ್ಲಿ ಭಾರಿ ಗುಪ್ತಗಾಯವಾಗಿ ಮೂಗಿನಿಂದ ರಕ್ತ ಬಂದಿರುತ್ತದೆ. ಬಲಕಾಲ ತೊಡೆ ಮುರಿದಿರುತ್ತದೆ. ಆಗ ಅಲ್ಲಿಂದಲೇ ಹೋಗುತ್ತಿದ್ದ ಮನೋಜಕುಮಾರ ಮತ್ತು ಸುನೀಲ ತಂದೆ ಬಸವರಾಜ ಖಂಡ್ರೆ ರವರು ನೋಡಿ ಇಬ್ಬರು ಕೂಡಿ ಒಂದು ಖಾಸಗಿ ವಾಹನದಲ್ಲಿ ಹಾಕಿಕೊಂಡು ಚಿಕಿತ್ಸೆ ಕುರಿತು ಸರಕಾರಿ ಆಸ್ಪತ್ರೆ ಬೀದರಗೆ ತ ಚಿಕಿತ್ಸೆ ಕುರಿತು  ಆಸ್ಪತ್ರೆಯಲ್ಲಿ ಸೇರಿಕೆ ಮಾಡಿದಾಗ ವೈಧ್ಯಾಧಿಕಾರಿಗಳು ಪರಿಕ್ಷೀಸಿ ದಿನಾಂಕ 23.11.2022 ರಂದು 1011 ಗಂಟೆಗೆ ಮೃತಪಟ್ಟಿರುತ್ತಾನೆ. ಅಂತ ದೃಡಪಡಿಸಿರುತ್ತಾರೆ.  ಅಂತಾ ಫಿರ್ಯಾದಿ ನಾಗವೇಣಿ ಗಂಡ ವಿರರಾಜು ವಯ : 60 ವರ್ಷ ರವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 206/2022 ಕಲಂ 392 ಐಪಿಸಿ :-

ದಿನಾಂಕ 23/11/2022 ರಂದು 1945 ಗಂಟೆಗೆ ಫಿರ್ಯಾದಿ ಶ್ರೀ ಸಂದೀಪ ತಂದೆ ರಮೇಶ ಬೆಲ್ದಾಳೆ ವಯ:31 ವರ್ಷ ಜಾತಿ:ಲಿಂಗಾಯತ ಉ:ಒಕ್ಕಲತನ ಕೆಲಸ ಸಾ:ನಾಗನಪಲ್ಲಿ ತಾ:ಔರಾದ ಸಧ್ಯ ಕೆ,ಹೆಚ,ಬಿ (ಎಲ,ಐ,ಜಿ) ಕಾಲೋನಿ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶ ಏನೆಂದರೆ ಇವರ ಹತ್ತಿರ ಒಂದು ಒಪ್ಪೋ ಎ5 ಮೊಬೈಲನ್ನು ಸುಮಾರು ಎರಡು ವರ್ಷಗಳ ಹಿಂದೆ ಖರೀದಿಸಿದ್ದು ಅದರ ಐ.ಎಮ್.ಇ.ಐ. ಸಂಖ್ಯೆ. 869625044170177 ಮತ್ತು 869625044170169 ಇರುತ್ತದೆ. ಆವಾಗ ಅದರಲ್ಲಿ ಸಿಮ್. ಸಂಖ್ಯೆ. 8150800650 ಇತ್ತು. ಅದರ ಅಂದಾಜು ಕಿಮ್ಮತ್ತು 15,000/-ರೂ. ಇರುತ್ತದೆ. ಹೀಗಿರುವಾಗ ದಿನಾಂಕ 21/11/2022 ರಂದು ಸಾಯಂಕಾಲ 8:00 ಪಿ.ಎಮ್. ಗಂಟೆಯ ಸಮಯಕ್ಕೆ ಕೆ,ಹೆಚ,ಬಿ(ಎಲ,ಐ,ಜಿ) ಕಾಲೋನಿ ಗಾರ್ಡನ ಹತ್ತಿರ ಫೋನಿನಲ್ಲಿ ಮಾತನಾಡುತ್ತಾ ನಿಂತಿರುವಾಗ, ಅಷ್ಟರಲ್ಲಿ ಬಿರಾದಾರ ಆಸ್ಪತ್ರೆಯ ಕಡೆಯಿಂದ ಒಂದು ಬಜಾಜ ಪಲ್ಸಾರ ಎನ್.ಎಸ್.125 ಮೊಟರ ಸೈಕಲ ಮೇಲೆ ಮೂರು ಜನ ಅಪರಿಚಿತ ಕಳ್ಳರು ಬಂದು ಇವರ ಕೈಯಿಂದ ಮೊಬೈಲನ್ನು ಕಸಿದುಕೊಂಡು ಶಿವಮಂದಿರ ಕಡೆಗೆ ಹೋಗಿದ್ದು ಇರುತ್ತದೆ ÀÄ ಅವರನ್ನು ಬೆನ್ನಟ್ಟಿದ್ದು ಅವರು ವೇಗವಾಗಿ ಹೋಗುವಾಗ ಅವರ ಮೋಟರ ಸೈಕಲ ನಂ ಕೆಎ38ವಾಯ9298 ನೇದನ್ನು ನೋಡಿದ್ದು ಇರುತ್ತದೆ, ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

## ಭಾಲ್ಕಿ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 190/2022 ಕಲಂ 380, 427,  457. ಐಪಿಸಿ :-

**ದಿನಾಂಕ 23/11/2022 ರಂದು 11:30 ಗಂಟೆಗೆ ಸಂಗಪ್ಪಾ ತಂದೆ ಕಾಶೇಪ್ಪಾ ಗೋಣೆ ವಯ 55 ವರ್ಷ ಜಾ: ಲಿಂಗಾಯತ ಉ: ಒಕ್ಕಲುತ ಕೆಲಸ ಸಾ: ಬಸವನಗರ ಭಾಲ್ಕಿ. ರವರು ಠಾಣೆಗೆ ಹಾಜರಾಗಿ** ದೂರೂ ನೀಡಿದರ **ಸಾರಾಂಶವೇನೆಂದರೆ,** ಇವರು **ಸುಮಾರು 2 ವರ್ಷಗಳಿಂದ ಭಾಲ್ಕಿನಗರದ ಹೊಲ** ಸರ್ವೆ **ನಂಬರ್ 354 ನೇದರಲ್ಲಿ ಇರುವ ಶ್ರೀ ಈಶ್ವರ ಖಂಡ್ರೆ ರವರ ತಾಯಿಯವರ ಸಮಾಧಿ ಸ್ಥಳದ ಕಟ್ಟಡವನ್ನು ನೋಡಿಕೊಳ್ಳುತ್ತಾ ಮತ್ತು ಹೊಲದಲ್ಲಿ ಒಕ್ಕಲುತನ ಕೆಲಸ ಮಾಡಿಕೊಂಡು ಇರುತ್ತೇನೆ.ಎಂದಿನಂತೆ ದಿನಾಂಕ: 22/11/2022 ರಂದು ಮುಂಜಾನೆ 6 ಗಂಟೆಯ ಸುಮಾರಿಗೆ ಮನೆಯಿಂದ ಹೊಲಕ್ಕೆ ಹೋಗಿ ಹೊಲದಲ್ಲಿ ಕೆಲಸ ಮಾಡಿ ಹೊಲದಲ್ಲಿರುವ ಸಮಾದಿ ಸ್ಥಳದಲ್ಲಿರುವ ಕಟ್ಟಡದ ಕೀಲಿ ಹಾಕಿಕೊಂಡು ಮರಳಿ ಮನೆಗೆ ರಾತ್ರಿ 7 ಗಂಟೆಗೆ ಬಂದಿರುತ್ತೇನೆ. ದಿನಾಂಕ: 23/11/2022 ರಂದು ಮುಂಜಾನೆ 6 ಗಂಟೆಯ ಸುಮಾರಿಗೆ ನಾನು ಮನೆಯಿಂದ ಹೊಲಕ್ಕೆ ಹೋಗಿ ಹೊಲದಲ್ಲಿರುವ ಸಮಾಧಿಯ ಕಟ್ಟಡದ ಬಾಗಿಲು**

ನೋಡಲು ಬಾಗಿಲಿನ ಕೀಲಿ ಮುರಿದು ಬಾಗಿಲು ತೆರೆದಿದ್ದು ಕಂಡು ಬಂದಿರುತ್ತದೆ. ನಾನು ಕಟ್ಟಡದ ಒಳಗೆ ಹೋಗಿ ನೋಡಲಾಗಿ ಕಟ್ಟಡದ ಒಳಗೆ ಇರುವ ಬೆಡ್ಡ್ ರೂಮ್ ಬಾಗಿಲಿನ ಕೀಲಿ ಮುರಿದು ಒಳಗೆ ಪ್ರವೇಶ ಮಾಡಿ ಕೋಣೆಯಲ್ಲಿ ದಾಂದಲೆ ಮಾಡಿ ಬೆಡ್ಡ್ ರೂಮಿನಲ್ಲಿದ್ದ ಕಬ್ಬಿಣದ ಅಲಮಾರಿಯನ್ನು ಮುರಿದು ಅ.ಕಿ 50,000/- ರೂಪಾಯಿ ಹಾನಿ ಮಾಡಿ ಅಲಮಾರಿಯಲ್ಲಿಟ್ಟಿದ್ದ ಕಬ್ಬಣದ ಸಾಮಾನುಗಳು ಕಳವು ಮಾಡಿಕೊಂಡು ಹೋಗಿದ್ದು ಕಂಡು ಬಂದಿರುತ್ತದೆ.